ದಿನಾಂಕ 29 ನೇ ಫೆಬ್ರುವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಪ್ರತಿವಾದಿ ಪರ ವಕೀಲರಿಂದಃ-

ನಾನು ಬಿ ಎ ಪಧವೀಧರ. ದಾರಿಗೆ ಗೇಟು ಹಾಕಿದ್ದಾರೆ, ಓಡಾಡಲು ದಾರಿ ಬೇಕು ಎಂದು ದಾವೆ ಸಲ್ಲಿಸಿದ್ದಾರೆ. ಸ.ನಂ. 18 ರಲ್ಲಿ ರಸ್ತೆ ಇದೆ. 2017 ರಲ್ಲಿ ದಾರಿಗೆ ಗೇಟು ಹಾಕಿದ್ದಾರೆ ದಿನಾಂಕ ನೆನಪಿಲ್ಲ. ಪ್ರತಿವಾದಿ ಪರಿಚಯ ಅವರು ನಮ್ಮ ಕುಟುಂಬದವರು. ಪ್ರತಿವಾದಿ ಹಾಗೂ ನನ್ನ ನಡುವೆ ಮಾತುಕತೆ ಇಲ್ಲ ಹಾಗೂ ರಸ್ತೆ ಗೇಟು ಹಾಕುವ ವಿಚಾರವಾಗಿ ನಿಷ್ಠೂರ ಇದೆ ಎನ್ನುತ್ತಾರೆ. ನಾನು ಪ್ರತಿವಾದಿ ವಿರುದ್ಧ ಕ್ರಿಮಿನಲ್‌ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿ.

ಕುಂದ ಮತ್ತು ಪೊನ್ನಂಪೇಟೆ ಮುಖ್ಯ ರಸ್ತೆಯಿಂದ ನಾನು ಹೇಳುತ್ತಿರುವ ರಸ್ತೆಗೆ ಯಾವುದೇ ಕಲ್ಲು ಹಾಕಿರಲಿಲ್ಲ ಅದು ಮಣ್ಣು ರಸ್ತೆ ಎನ್ನುತ್ತಾರೆ. ಸದರಿ ರಸ್ತೆ 10 ರಿಂದ 12 ಅಡಿ ಅಗಲ ಇದೆ ಎನ್ನುತ್ತಾರೆ. ಕುಂದಾ ಮತ್ತು ಪೊನ್ನಂಪೇಟೆ ರಸ್ತೆಯಿಂದ ನಮ್ಮ ಗದ್ದೆ ಸುಮಾರು ಆರ್ಧ ಕಿ.ಮಿ ದೂರ ಇದೆ ಎನ್ನುತ್ತಾರೆ. ಸದರಿ ರಸ್ತೆಯ ಸ.ನಂ. ಅನ್ನು ನಿಖರವಾಗಿ ಹೇಳುಲಾಗುವುದಿಲ್ಲ. ಸದರಿ ರಸ್ತೆ ಕುಟುಂಬದವರ ಆಸ್ತಿಗಳಲ್ಲಿ ರಸ್ತೆ ಹಾದುಹೋಗಿರುತ್ತದೆ ಎನ್ನುತ್ತಾರೆ. ಸ.ನಂ. 3/5 93 ಸೆಂಟ್ ಬಾಣೆ ಜಾಗ ಯಾರದ್ದೊ ಎಂದು ನನಗೆ ಗೊತ್ತಿಲ್ಲ. ನಂಜಪ್ಪ ರವರ ಹೆಸರಿನಲ್ಲಿ ಮೊದಲು ಇತ್ತು ಈ ಯಾರ ಹೆಸರಿನಲ್ಲಿ ಇದೆ ಎಂದು ಗೊತ್ತಿಲ್ಲ. ಸದರಿ ಸ. ನಂ. 3/5 ಪ್ರತಿವಾದಿಗೆ ಸೇರಿದ್ದೊ ಅಥ ವಾ ಇಲ್ಲವೊ ನನಗೆ ನಿಖರವಾಗಿ ಗೊತ್ತಿಲ್ಲ. ಸ. ನಂ. 3/4 ನನ್ನ ಹೆಸರಿನಲ್ಲಿ ಇಲ್ಲ. ಅದು ನಮ್ಮ ಕುಟುಂಬದ ಪಟ್ಟೇದಾರರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸ. ನಂ. 3/4 ರಲ್ಲಿ ವಾದಿಯರು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ನಂಜಪ್ಪನವರ 4 ಹೆಣ್ಣು ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ. ಸದರಿ ಹೆಣ್ಣು ಮಕ್ಕಳು ಈ ದಾವೆಯಲ್ಲಿ ಪಕ್ಷಗಾರರು ಅಲ್ಲ ಎನ್ನುತ್ತಾರೆ.

ಸ.ನಂ. 3/5 ವಾದಿಯವರ ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಯಾರ ಸ್ವಾಧೀನದಲ್ಲಿ ಇದ್ದಾರೆ ಎಂದು ನನಗೆ ಗೊತಿಲ್ಲ. ಸ.ನಂ. 3/5 ರಲ್ಲಿ ವಾದಿಯವರು ಸ್ವಾಧೀನದಲ್ಲಿ ಇರುವ ವಿಚಾರ ನನಗೆ ಗೊತ್ತಿದ್ದರೂ ಸಹ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸ. ನಂ. 3/4 ನನ್ನ ಹೆಸರಿನಲ್ಲಿ ಇಲ್ಲ. ಅದು ನಮ್ಮ ಕುಟುಂಬದ ಪಟ್ಟೇದಾರರ ಹೆಸರಿನಲ್ಲಿ ಇದೆ ಎನ್ನುತ್ತಾರೆ. ಸ. ನಂ. 3/3 ರಲ್ಲಿ ವಾದಿಯರು ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ. ಸ. ನಂ. 3/3 ರಲ್ಲಿ ಯಾರು ಸ್ವಾ

ಧೀನದಲ್ಲಿ ಇದ್ದಾರೆ ಎಂದು ನನಗೆ ಗೊತ್ತಿಲ್ಲ. ಸ. ನಂ. 3/2 ಹಿಂದೆ ನಂಜಪ್ಪನವರ ಹೆಸರಿನಲ್ಲಿ ಇತ್ತು ಈಗ ನಂಜಪ್ಪನವರ 4 ಜನ ಹೆಣ್ಣು ಮಕ್ಕ ಳು ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ.

ಸ. ನಂ. 15 ಮತ್ತು 16 ರ ನಡುವೆ ದೊಡ್ಡ ತೋಡು ಇದೆ ಎಂದರೆ ಸರಿ. ಮಳೆಗಾಲದಲ್ಲಿ ಸದರಿ ತೋಡು ತುಂಬಾ ನೀರಿನಿಂದ ಹರಿಯುತ್ತದೆ ಎಂದರೆ ಸರಿ . ಸದರಿ ತೋಡ ು ದಾಟಲು ಹಿಂದೆ ಸರ್ಕಾರದವರು ಸೇತುವೆ ಮಾಡಿದ್ದರು. 10 ರಿಂದ 13 ವರ್ಷದ ಹಿಂದ ಸದರಿ ಸೇತುವೆ ಹೊಡೆದುಹೋಗಿದ್ದು ಆದೇ ಸ್ಥಳದಲ್ಲಿ ಚೆಕ್ ಡ್ಯಾಮ್ ಅನ್ನು ನಿರ್ಮಿಸಿದ್ದಾರೆ. ಪಿಲ್ಲರ್ ಹಾಕಿ ನೀರು ನಿಲ್ಲದೇ ಚೆಕ್ ಡ್ಯಾಮ್ ನಿರ್ಮಿಸಿದ್ದಾರೆ ಆದರೆ ಸದರಿ ಪಿಲ್ಲರ್ ಗಳ ಮೇಲೇ ಹಣದ ಕೊರತೆಯಿಂದ ಸ್ಲಾಬ್ ಹಾಕಿಲ್ಲ ಎನ್ನುತ್ತಾರೆ. 8 ರಿಂದ 9 ವರ್ಷದ ಹಿಂದೆ ಚೆಕ್ ಡ್ಯಾಮ್ ನಿರ್ಮಿಸಿದ್ದಾರೆ. ಹಿಂದೆ ಸೇತುವೆ ಇತ್ತು ಎಂದು ತೋರಿಸಲು ದಾಖಲಾತಿಯನ್ನು ಹಾಜರುಪಡಿಸಬಹುದು ನಿಖರವಾಗಿ ಗೊತ್ತಿಲ್ಲ. ನಾನು ಹೇಳಿದಂತೆ ಹಿಂದೆ ಯಾವುದೇ ಸೇತುವೆ ಇರಲ್ಲಿಲ್ಲ ಆದ ಕಾರಣ ದಾಖಲಾತಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ಕುಂದ ಮತ್ತು ಹಾತೂರು ಗ್ರಾಮದ ಗಡಿಯಲ್ಲಿ ನಮ್ಮ ಕುಟುಂಬಕ್ಕೆ ಸೇರಿದ 4 ಎಕರೆ 36 ಸೆಂಟ್ ಜಾಗ, ಸ.ನಂ. 11/1 ರಲ್ಲಿ ಇದೆ ಗಡಿಯ ಒಳಗಡೆ ಇದೆ ಎನ್ನುತ್ತಾರೆ. ಸದರಿ ಸ.ನಂ. 11/1 ಅನ್ನು ನಮ್ಮ ಹಿರಿಯರು ನಾಮೇರ ಕುಟುಂಬದವರಿಗೆ ಮಾರಾಟ ಮಾಡಿದ್ದಾರೆ ಎಂದೆಗೆ ನನಗೆ ಗೊತ್ತಿಲ್ಲ. ಸ.ನಂ. 11/1 ನಾಮೇರ ಕುಟುಂಬ ಹಾಗೂ ಕಡೇ ಮಾಡ ಕುಟುಂಬದವರ ಸ್ವಾಧೀನದಲ್ಲಿ ಇದೆ ಎನ್ನುತ್ತಾರೆ. ಸ.ನಂ. 11/1 ಹೊಂದಕೊಂಡಂತೆ ಸ.ನಂ. 16 ಕೃಷ ಭೂಮಿ ಇದೆ ಎಂದರೆ ಸರಿ. ಸದರಿ ಕೃಷ ಭೂಮಿ 8 ಎಕರೆ 50 ಸೆಂಟ್ ಇದೆ ಎಂದರೆ ಇದ್ದಿರಬಹುದು ಎನ್ನುತ್ತಾರೆ. ಸ.ನಂ. 16 ಅನ್ನು ನಮ್ಮ ಹಿರಿಯರು ನಾಮೇರ ಕುಟುಂಬದವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತಿಲ್ಲ. ಆದರೆ ಸಸ.ನಂ. 16 ರಲ್ಲಿ ನಾಮೇರ ಕುಟುಂಬದವರು ಸ್ವಾಧೀನದಲ್ಲಿ ಇದ್ದಾರೆ ಎನ್ನುತ್ತಾರೆ. ನಾಮೇರ ಕುಟುಂಬದವರು ಈ ದಾವಾ ರಸ್ತೆಯನ್ನು ಕೇಳುತ್ತಿಲ್ಲ ಎಂದರೆ ಸರಿ. ನಾಮೇರ ಕುಟುಂಬದವರು ಪೊನ್ನಂಪೇಟೆ ಕುಂದಾ ಮುಖ್ಯ ರಸ್ತೆಯಿಂದ ಸ.ನಂ. 11/1 ಕ್ಕೆ ಬಂದು ಅಲ್ಲಿಂದ ಸ.ನಂ. 16 ಕ್ಕೆ ಹೋಗುತ್ತಾರೆ ಎಂದರೆ ನಾಮೇರಾ ಕುಟುಂಬದವರು ಅವರ ಕುಟುಂಬದ ಬೇರೆ ಸ.ನಂ. ಜಾಗಕ್ಕೆ ಬಂದುಕಿ ಅಲ್ಲಿಂದ ಸ.ನಂ. 11/1 ಹಾಗೂ ಸ.ನಂ. 16 ಕ್ಕೆ ಹೋಗುತ್ತಾರೆ ಎನ್ನುತ್ತಾರೆ. ನಾಮೇರ ಕುಟುಂಬದವರ ಮತ್ತೊಂದು ಆಸ್ತಿ ಸ.ನಂ 178 ಕ್ಕೆ ಬಂದು ಸ.ನಂ 11/1 ಹಾಗೂ ಸ.ನಂ 16 ಕ್ಕೆ ಹೋಗುತ್ತಾರೆ ಎಂದರೆ ಮತ್ತೊಂದು ಆಸ್ತಿಯ ಸ.ನಂ. ನನಗೆ ಗೊತ್ತಿಲ್ಲ

ಎನ್ನುತ್ತಾರೆ. ಸ.ನಂ.178 ಕುಂದಾ ಪೊನ್ನಂಪೇಟೆ ಮುಖ್ಯ ರಸ್ತೆಗೆ ಹೊಂದಕೊಂಡಿದೆ ಎಂದರೆ ಆಗಿರಬಹುದು ಆದರೆ ನನಗೆ ನಿಖರವಾಗಿ ಗೊತ್ತಿಲ್ಲ. ಸ.ನಂ. 178 ರಿಂದ ಸ.ನಂ. 11/1 ಹಾಗೂ ಸ.ನಂ. 16 ಕ್ಕೆ ಹೋಗುವ ರಸ್ತೆ ನಕ್ಷೆಯಲ್ಲಿ ನಮೂದು ಆಗಿದೆ ಎಂದರೆ ನಾನು ನೋಡಿರುವುದಿಲ್ಲ ಎನ್ನುತ್ತಾರೆ. ನನಗೆ ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಇಲ್ಲ ಎಂದರೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಲಾಗಿ ನೀಡಲಾಯಿತು.

ಮರು ವಿಚಾರಣೆ ಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sdxxx-

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.